ಕರ್ನಾಟಕ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 579

ಸದಸ್ಯರ ಹೆಸರು : ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾವರು)

ಉತ್ತರಿಸಬೇಕಾದ ದಿನಾಂಕ : 10-03-2020

ಉತ್ತರಿಸುವವರು : ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೀದರ್ ಜಿಲ್ಲೆಯ ನಗರಸಭೆ, ಪಟ್ಟಣ ಪಂಚಾಯತ್, ಪುರಸಭೆವಾರು ಖಾಲಿ ಇರುವ ಸಿ.ಎ. ಸೈಟ್‌ಗಳ ಮತ್ತು ಲೇಔಟ್‌ವಾರು ವಿವರ ನೀಡುವುದು;	ಬೀದರ್ ಜಿಲ್ಲೆಯ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಲೇಔಟ್‌ವಾರು ಸಿ.ಎ ಸೈಟ್‌ಗಳ ವಿವರಗಳನ್ನು (ಅನುಬಂಧ-1) ರಲ್ಲಿ ಲಗತ್ತಿಸಿದೆ.
ಆ	ಯಾವ ಉದ್ದೇಶಕ್ಕಾಗಿ ಇವುಗಳನ್ನು ಹಂಚಿಕೆ ಮಾಡದೆ ಕಾಯ್ದಿರಿಸಲಾಗಿದೆ;	ಬೀದರ ನಗರದಲ್ಲಿನ ಲೇಔಟವಾರು ಖಾಲಿ ಸಿ.ಎ ಸೈಟ್‌ಗಳ ಹಂಚಿಕೆಯ ವಿಷಯವು ಬೀದರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದ್ದು, ಹಂಚಿಕೆ ಸಲುವಾಗಿ ಪ್ರಚುರ ಪಡಿಸಲಾಗಿರುತ್ತದೆ. ಇನ್ನುಳಿದ ನಗರಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಖಾಲಿ ಇರುವ ಸಿ.ಎ. ಸೈಟ್‌ಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ:ಯುಡಿಡಿ/27/ಟಿ.ಟಿ.ಪಿ/2016, ದಿನಾಂಕ: 24.05.2017 ಹಾಗೂ ಸುತ್ತೋಲೆ ಸಂಖ್ಯೆ:ನಅಇ/01/ಟಿ.ಎಂ.ಡಿ./2018 ದಿನಾಂಕ: 30.01.2018 ರಂತೆ ಸರ್ಕಾರದ ಇಲಾಖೆಗಳಾದ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ವಿದ್ಯಾರ್ಥಿಗಳ ವಸತಿ ನಿಲಯಗಳ ನಿರ್ಮಾಣಕ್ಕಾಗಿ ಮಂಜೂರು ಮಾಡಲಾಗಿದೆ. ಸಾರ್ವಜನಿಕ ಉದ್ದೇಶಕ್ಕಾಗಿ ಸಾಮಾಜಿಕ ಸಂಘ ಸಂಸ್ಥೆಗಳಿಂದ ಅರ್ಜಿಗಳು ಸ್ವೀಕೃತವಾದಲ್ಲಿ ನಿಯಮಾನುಸಾರ ಕಾಯ್ದಿರಿಸಿ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.
ಇ	ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಯಾವ ಯಾವ ಯೋಜನೆಯಡಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; ಕೈಗೊಂಡಲ್ಲಿ, ಯೋಜನೆವಾರು, ಪ್ರತಿ ವಾರ್ಡ್‌ವಾರು, ವರ್ಷವಾರು ಸಂಪೂರ್ಣ ವಿವರ ನೀಡುವುದು?	➢ 14ನೇ ಹಣಕಾಸು ಆಯೋಗದ ಅನುದಾನ: ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ, ಕಳೆದ 3 ವರ್ಷಗಳಲ್ಲಿ 14ನೇ ಹಣಕಾಸು ಆಯೋಗದ ಅನುದಾನದಡಿ ಕೈಗೊಂಡಿರುವ ವರ್ಷವಾರು, ನಗರ ಸ್ಥಳೀಯ ಸಂಸ್ಥೆವಾರು, ವಾರ್ಡ್‌ವಾರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು (ಅನುಬಂಧ-2) ರಲ್ಲಿ ಲಗತ್ತಿಸಿದೆ. ➢ ಕೇಂದ್ರ ಪುರಸ್ಕೃತ 'ಅಮೃತ್' ಯೋಜನೆ: ಕೇಂದ್ರ ಪುರಸ್ಕೃತ 'ಅಮೃತ್' ಯೋಜನೆಯಡಿ ಬೀದರ್ ಜಿಲ್ಲೆಯ, ಬೀದರ್ ನಗರಸಭೆಯು ಮಾತ್ರ ಆಯ್ಕೆಯಾಗಿದ್ದು, ಕಳೆದ 3 ವರ್ಷಗಳ ಅವಧಿಯಲ್ಲಿ ವಾರ್ಡ್‌ವಾರು ಕೈಗೊಂಡಿರುವ ಕಾಮಗಾರಿಗಳ ಸಂಪೂರ್ಣ ವಿವರಗಳನ್ನು (ಅನುಬಂಧ-3) ರಲ್ಲಿ ಲಗತ್ತಿಸಿದೆ. ➢ ಎಸ್.ಎಫ್.ಸಿ. ಅನುದಾನ: 1. ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ, ಎಸ್.ಎಫ್.ಸಿ

		ಮುಕ್ತನಿಧಿ ಅನುದಾನದಡಿಯಲ್ಲಿ ಕಳೆದ 3 ವರ್ಷಗಳಲ್ಲಿ (2016-17 ರಿಂದ 2018-19 ನೇ ಸಾಲಿನ ವರೆಗೆ) ಕೈಗೊಂಡಿರುವ ವರ್ಷವಾರು, ನಗರ ಸ್ಥಳೀಯ ಸಂಸ್ಥೆವಾರು, ವಾರ್ಡ್‌ವಾರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು (ಅನುಬಂಧ-4) ರಲ್ಲಿ ಲಗತ್ತಿಸಿದೆ. 2. ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಡಿಯಲ್ಲಿ ಕಳೆದ 3 ವರ್ಷಗಳಲ್ಲಿ (2016-17 ರಿಂದ 2018-19 ನೇ ಸಾಲಿನ ವರೆಗೆ) ಕೈಗೊಂಡಿರುವ ವರ್ಷವಾರು, ನಗರ ಸ್ಥಳೀಯ ಸಂಸ್ಥೆವಾರು, ವಾರ್ಡ್‌ವಾರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು (ಅನುಬಂಧ-5) ರಲ್ಲಿ ಲಗತ್ತಿಸಿದೆ. 3. ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿ 2017-18ನೇ ಸಾಲಿಗೆ ಮಾತ್ರ ಬಿಡುಗಡೆಯಾಗಿದ್ದು ಸದರಿ ಸಾಲಿನಲ್ಲಿ ಕೈಗೊಂಡಿರುವ ನಗರ ಸ್ಥಳೀಯ ಸಂಸ್ಥೆವಾರು, ವಾರ್ಡ್‌ವಾರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು (ಅನುಬಂಧ-6) ರಲ್ಲಿ ಲಗತ್ತಿಸಿದೆ. ➢ ನಗರೋತ್ಥಾನ ಯೋಜನೆ: ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ ನಗರೋತ್ಥಾನ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳ ನಗರಸ್ಥಳೀಯ ಸಂಸ್ಥೆಯವಾರು, ವರ್ಷವಾರು ವಾರ್ಡ್‌ವಾರು, ವಿವರಗಳನ್ನು (ಅನುಬಂಧ-7)ರಲ್ಲಿ ನೀಡಿದೆ. ➢ ಕಲ್ಮಷ ತ್ಯಾಜ್ಯ ಮತ್ತು ನೈರ್ಮಲ್ಯ ಸಂಸ್ಕರಣ ಯೋಜನೆ: ಬೀದರ್ ಜಿಲ್ಲೆಯ ಭಾಲ್ಕಿ ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ, 2018-19ನೇ ಸಾಲಿನ ಕಲ್ಮಷ ತ್ಯಾಜ್ಯ ಮತ್ತು ನೈರ್ಮಲ್ಯ ಸಂಸ್ಕರಣ ಯೋಜನೆಯಡಿ ಕಲ್ಮಷ ತ್ಯಾಜ್ಯವನ್ನು ಸಂಸ್ಕರಿಸುವ ಘಟಕವನ್ನು (Faecal Sludge Treatment Plant) ಸ್ಥಾಪಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಸದರಿ ಘಟಕವನ್ನು ಸ್ಥಾಪಿಸಲು ಸರ್ಕಾರದಿಂದ ರೂ.400.00 ಲಕ್ಷಗಳು ಮಂಜೂರಾಗಿದ್ದು, ಈ ಪೈಕಿ ರೂ.200.00 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ನಅಇ 10 ಜಿಇಎಲ್ 2020

(ಡಾ॥ ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು